

ಮಾಯವಾಗಿದೆ! ಯೂರೋಪ್‌ನ ಮಾಂತ್ರಿಕ ಮಾಯಗಾರ ಕಲಾವಿದ ಹ್ಯಾರಿ ಹೌದಿನಿ. ಇಲ್ಲಿ ಮಾಯವಾದ ಈ ಹಾವನ್ನು ಝೂ ಸಿಬ್ಬಂದಿ 'ಹೌದಿನಿ' ಎಂದೂ ಸಂಬೋಧಿಸತೊಡಗಿದರು.

ಸರ್ಪ ಮಾಯವಾಗಿದೆಯೆಂದು ತಿಳಿದ ಕೂಡಲೇ ಇಡೀ ಸರೀಸೃಪ ವಿಭಾಗವನ್ನು ಮುಚ್ಚಲಾಯಿತು. ನೆಲಕ್ಕೆ ಹಿಟ್ಟನ್ನು ಹಾಕಿ ಅದರ ಜಾಡು ಹಿಡಿಯುವ ಪ್ರಯತ್ನ ನಡೆಯಿತು. ಸತ್ತ ಇಲಿಗಳನ್ನು ಅಲ್ಲಲ್ಲಿ ಇರಿಸಲಾಯಿತು. ಏನೂ ಉಪಯೋಗವಾಗಲಿಲ್ಲ.

ವಿದ್ಯುತ್ ಮತ್ತು ಪ್ಲಂಬಿಂಗ್ ಇಲಾಖೆಯ ಸಹಾಯದಿಂದ ಇಡೀ ಕಟ್ಟಡದ ನೀಲನಕ್ಷೆ ಹೊರಬಂದಿತು. ಅತ್ಯುತ್ತಮ ಕ್ಯಾಮೆರಾಗಳು ಮೂಲೆಮೂಲೆಯನ್ನೂ ಶೋಧಿಸಿದವು. ನೆಲದಾಳದ ಹತ್ತಾರು ಪೈಪ್‌ಗಳ ಒಳಗೂ ಫೈಬರ್ ಆಪ್ಟಿಕ್ಸ್ ಕ್ಯಾಮೆರಾ ತೂರಿದವು. ಚಕಚಕನೆ ಬೆಳಕು ಅಡ್ಡಾಡಿ ಮಾಹಿತಿ ತಂದಿತು. ಊಹೂಂ ಹಾವು ಎಲ್ಲೂ ಇಲ್ಲ. ಕಟ್ಟಡದ ಹೊರಗಂತೂ ಹಾವು ಹರಿದು ಹೋಗಲು ಸಾಧ್ಯವೇ ಇಲ್ಲ, ಏಳೆಂಟು ಡಿಗ್ರಿ ಸೆಲ್ಸಿಯಸ್ ಕಡುಚಳಿಯಲ್ಲಿ ಅಡ್ಡಾಡುವ ಮೂರ್ಖ ಅದಲ್ಲವೇ ಅಲ್ಲ. ಸ್ಕಾನ್‌ಸೆನ್ ಝೂನಲ್ಲಿ ಪ್ರಾಣಿಗಳಿಗೆಂದು ಕೃತಕವಾಗಿ ಸೃಷ್ಟಿಸಿಟ್ಟ ನೂರಾರು ಬಿಲ, ಸುರಂಗಗಳಿವೆ, ಯಾವುದಾದರೂ ಸಂದಿಯಲ್ಲಿ ಅಡಗಿದ್ದರೆ? ಗೋಡೆಯೊಳಗಿನ ಬಿರುಕಿನಲ್ಲಿ ಮುದ್ದೆಯಾಗಿ ಕುಳಿತಿದ್ದರೆ?

ಕಸ್ಟಮ್ಸ್ ವಿಭಾಗಕ್ಕೆ ಕರೆ ಹೋಯಿತು. ವಿಮಾನಗಳಲ್ಲಿ ಮಾದಕ ದ್ರವ್ಯಗಳ ಪತ್ತೆಗೆಂದು ಬಳಸುವ ಎಕ್ಸ್‌ರೇ ಕ್ಯಾಮೆರಾಗಳು (ಈ ಮಷಿನ್‌ಗಳು ತೂರಿ ಬಿಡುವ ಎಕ್ಸ್‌ರೇಗಳು ವಿಷ ವಸ್ತುವಿನ ಒಳ ಅಣುಗಳೊಳಗೆ ಓಡಾಡಿ ವಿಶಿಷ್ಟ ವಿನ್ಯಾಸವನ್ನು ಪರದೆಯ ಮೇಲೆ ಮೂಡಿಸುತ್ತವೆ), ಜೊತೆಗೆ ಅತ್ಯುತ್ತಮ ಪತ್ತೇದಾರರೂ ಬಂದಿಳಿದರು.

ಮಣ್ಣಿನ ಗೋಡೆಗಳಲ್ಲಿ, ಮರದ ವಿಭಜಕಗಳಲ್ಲಿ ಡ್ರಿಲ್ಲಿಂಗ್ ಮಷಿನ್ ತೂತು ಕೊರೆಯಿತು. ಒಂದೆರಡು ಬಾರಿ ಒಂದು ತೂತಿನಿಂದ ಹಾವು ಹೊರಗೆ ಇಣುಕಿತ್ತು, ಕಸ್ಟಮ್ಸ್ ಅಧಿಕಾರಿಗಳ ದಂಡು ನೋಡಿ ಬೆಚ್ಚಿರಬೇಕು, ಮತ್ತೆ ಓಡಿ ಅವಿತಿತು.

'ಸರ್ ಹಿಸ್ ಸಿಕ್ಕಿದ — ಮತ್ತೆ ಮಾಯ!' ಸೋಷಿಯಲ್ ಮೀಡಿಯಾಗಳಲ್ಲಿ ಸ್ವೀಡಿಶ್ ಕಸ್ಟಮ್ಸ್ ಇಲಾಖೆಯ ಹೇಳಿಕೆ ರಾರಾಜಿಸಿತು.

'ಒಳಾಂಗಣದ ಗೋಡೆಯ ಸಂದಿಯೊಂದರಲ್ಲಿ ಸರ್ ಹಿಸ್ ಅಡಗಿದ್ದು ಗೊತ್ತಾಗಿದೆ, ಕಸ್ಟಮ್ಸ್ ಅಧಿಕಾರಿಗಳಿಗೆ ಥ್ಯಾಂಕ್ಸ್…' ಎಂದಿತು ಅಕ್ವೇರಿಯಂ ತಂಡ. 'ಇನ್ನೇನು ಅದನ್ನು ಹಿಡಿದು ಆಪರೇಶನ್ ಮುಕ್ತಾಯಗೊಳಿಸುವಷ್ಟರಲ್ಲಿ ಅದು ಮತ್ತೆ ಮಾಯವಾಯಿತು' ಎಂದಿತ್ತು ಝೂ ಮುಂದಿನ ಪೋಸ್ಟ್.

'ಆತಂಕ ಬೇಡ, ತನ್ನಷ್ಟಕ್ಕೆ ಇರುವ ಪ್ರಾಣಿ ಕಿಂಗ್ ಕೋಬ್ರಾ, ಕಂಡರೆ ಯಾರೂ ಅದರ ಸುದ್ದಿಗೆ ಹೋಗಬೇಡಿ' ಸ್ವೀಡನ್ ರೇಡಿಯೊ ಅನೌನ್ಸ್ ಮಾಡಿತು.

'ಯು ಕ್ಯಾನ್ ರನ್ ಫ್ರಮ್ ಕಸ್ಟಮ್ಸ್ ಬಟ್ ಕ್ಯಾನ್ ನಾಟ್ ಹೈಡ್ ಫ್ರಮ್ ದೆಮ್' (ನೀನು ಕಸ್ಟಮ್ಸ್‌ನವರಿಂದ ದೂರ ಓಡಬಹುದು, ಆದರೆ ತಪ್ಪಿಸಿಕೊಳ್ಳೋಕೆ ಸಾಧ್ಯವೇ ಇಲ್ಲ) ಇನ್ನೂ ಆಸೆಯಿಂದಿದ್ದ ಅಧಿಕಾರಿಗಳು ಗುರುಗುಟ್ಟಿದರು.

170 ಕಿ.ಮೀ. ದೂರದಲ್ಲಿದೆ ಇಡೀ ಸ್ಕಾಂಡಿನೇವಿಯ ದೇಶಗಳಲ್ಲಿ ಅತಿ ದೊಡ್ಡದಾದ ಕೋಲ್ಮಾರ್ಡನ್ಸ್ ಮೃಗಾಲಯ. ಅಲ್ಲಿನ ಸರೀಸೃಪ ತಜ್ಞ ಕಲ್ಲೆ ಮೆಲ್ಲರ್ಸನ್ ಸಹಾಯ ಕೋರಲಾಯಿತು. ಎರಡು ದಿನಗಳಲ್ಲಿ ಆತನೂ ಬಂದು ಹುಡುಕತೊಡಗಿದ. ಆದರೆ ಅದೇನಾಶ್ಚರ್ಯ! ಅದೆಲ್ಲಿ ಬಚ್ಚಿಟ್ಟುಕೊಂಡಿತ್ತೊ ಅಥವಾ ವಿಹಾರ ನಡೆಸಿತ್ತೊ ಮರೆಯಾದ ಆರು ದಿನಗಳ ನಂತರ ಬೆಳಿಗ್ಗೆ ಮರಳಿ ಬಂದು ತನ್ನ ಗೂಡಿನಲ್ಲಿ ಸುತ್ತಿ, ಮುದುಡಿ ಬೆಚ್ಚಗೆ ಕೂತಿತ್ತು 'ಹೌದಿನಿ'!

'ಅವನನ್ನು ಮರಳಿ ಪಡೆದೆವು… ಹ್ಯಾಲೋವೀನ್ ಹಬ್ಬಕ್ಕೆ ಕೊಡುಗೆ ಇದು…' ಎಂದು ಅಕ್ವೇರಿಯಂ ತಂಡ ಘೋಷಿಸಿತು. ಒಂದು ವಾರದ ಅಜ್ಞಾತವಾಸದ ನಂತರ ಅಕ್ಟೋಬರ್ 31ಕ್ಕೆ ಮತ್ತೊಮ್ಮೆ 'ಸರ್ ಹಿಸ್' ಪ್ರದರ್ಶನಕ್ಕೆ ಸಜ್ಜಾಯಿತು.

ಭಾರತದಲ್ಲಿ ಈ ಸುದ್ದಿಯ ಪ್ರಸಾರ ಹೇಗಿತ್ತು?

ಈ ಕಾಳಿಂಗ ಸರ್ಪ ಹಿಡಿಯಲು ಕೇರಳದ ಉರಗತಜ್ಞ 'ವಾವಾ ಸುರೇಶ್' ಅವರನ್ನು ಸಂಪರ್ಕಿಸಲಾಗಿದೆ, ಅವರನ್ನು ಕರೆದೊಯ್ಯಲೆಂದು ಸ್ವೀಡನ್‌ನಿಂದ ವಿಶೇಷ ವಿಮಾನ ಬರ್ತಾ ಇದೆ… ಇತ್ಯಾದಿ ಮಾಧ್ಯಮಗಳು ವರದಿ ಮಾಡತೊಡಗಿದವು. ವಾವಾ ಸುರೇಶ್ ಖ್ಯಾತ ವನ್ಯಜೀವಿ ಸಂರಕ್ಷಕ. ಸುಮಾರು ಮುನ್ನೂರು ಬಾರಿ ವಿಷ ಹಾವುಗಳಿಂದ ಕಚ್ಚಿಕೊಂಡವರು, ಆದರೂ ಬರಿಗೈಲಿ ಹಾವನ್ನು ಹಿಡಿಯುವ ಅನುಭವಿ. ಸ್ನೇಕ್ ಮಾಸ್ಟರ್ ಎಂಬ ಟೀವಿ ಶೋದಲ್ಲಿ ವಾವಾ ಸುರೇಶ್ ಅವರ ಕೈಚಳಕವನ್ನು ಸ್ವೇನ್ ದೇಶದಲ್ಲಿ ಕುಳಿತು ನೋಡಿದ್ದ ಮಲೆಯಾಳಿ ವ್ಯಕ್ತಿಯೊಬ್ಬ ವಿಷಯ ತಿಳಿದು ಆತನನ್ನು ಸಂಪರ್ಕಿಸಿದ್ದಂತೆ. ಅಲ್ಲಲ್ಲ, ಸ್ಕಾನ್‌ಸೆನ್‌ನ ಬೇಸತ್ತ ಸಿಬ್ಬಂದಿಯೊಬ್ಬ ವೈಟ್‌ಹೌಸ್‌ನಲ್ಲಿದ್ದ ತನ್ನ ಮಲೆಯಾಳಿ ಮಿತ್ರನಿಗೆ ಹೇಳಿಕೊಂಡಾಗ ಕೇರಳದ ತಜ್ಞನ ಬಗ್ಗೆ ಆತ ತಿಳಿಸಿದ್ದಂತೆ. ಯಾವ ಹೊತ್ತಿಗೂ ಅದು ಜನವಸತಿಯನ್ನು ಸೇರಿಕೊಳ್ಳಬಹುದು, ಜನರು ಭಯಭೀತರಾಗಿದ್ದಾರೆ ಇತ್ಯಾದಿ ಪುಂಖಾನುಪುಂಖವಾಗಿ ವರದಿಗಳು ಬಂದವು.

'ಕಾಳಿಂಗ ಸರ್ಪ ಮರಳಿ ಬಂದಿತಂತೆ' ನಾವು ಸುರತ್ಕಲ್‌ನ ಅಜ್ಜನಿಗೆ ತಿಳಿಸಿದೆವು.

'ಅದೇನೋ ಸರಿ, ನಮ್ಮ ವಾವಾ ಸುರೇಶ್‌ಗೆ ಸ್ವೀಡನ್ ಪ್ರವಾಸ ತಪ್ಪಿತಲ್ಲ ಮಾರ್ರೆ?' ಅವರೆಂದರು.

ಪ್ರತಿಕ್ರಿಯಿಸಿ: feedback@sudha.co.in